ಓ.ಎಸ್. ನಂಃ **131/2017**
ಪಿ <u>ಡಬ್ಲ್ಯೂಃ **1**</u>

ದಿನಾಂಕಃ 13-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಹೆಚ್ ಜಿ ವಕೀಲರಿಂದಃ</u>

7. ನಂದೇಪಲ್ಲಿ ಗ್ರಾಮ ಈಗ ಕೊಂಕಲ್ ಹೋಬಳಿ ಹಾಗೂ ಗುರುಮಠಕಲ್ ತಾಲೂಕಿನಲ್ಲಿ ಬರುತ್ತದೆ. ಆದರೆ ನೀವು ನಿಪಿ-56ರ ವಂಶವೃಕ್ಷದ ದೃಡೀಕರಣ ಪತ್ರವನ್ನು ಯಾದಗಿರಿ ತಹಸಿಲ್ದಾರರವರ ಕಡೆಯಿಂದ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಸರಿ, ನಾನು ಕೊಂಕಲ್ ಕಂದಾಯ ಅಧಿಕಾರಿಗಳಿಂದಲೂ ಸಹ ವಂಶವೃಕ್ಷ ದೃಡೀಕರಣ ಪತ್ರ ಪಡೆದು ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಒಂದು ಹಳ್ಳಿಯ ನಿವಾಸಿ ಸದರಿ ಹಳ್ಳಿಗೆ ಸಂಬಂಧಿಸಿದದ ತಹಸಿಲ್ದಾರ ಕಚೇರಿಯಿಂದ ವಂಶವೃಕ್ಷ ದೃಡೀಕರಣ ಪತ್ರ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಾನು ನಂದೆಪಲ್ಲಿಯ ಬಾಲಪ್ಪ ತಂದೆ ಗಜಲಪ್ಪ ರವರಿಗೆ ಸಂಬಂಧವಿರದ ನಿಪಿ-56ರ ದಾಖಲೆ ಹಾಜರು ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-56ರ ದೃಡೀಕರಣ ಪತ್ರದಲ್ಲಿ ಕುಟುಂಬ ಸದಸ್ಯರ ವಿವರಗಳು ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗೂ ಹಾಗೂ ಬಾಲಪ್ಪ ಮತ್ತು ಗಜಲಪ್ಪ ರವರ ಕುಟುಂಬಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡುವ ಉದ್ದೇಶದಿಂದ ಯಾದಗಿರಿ ತಹಸಿಲ್ದಾರರವರಿಂದ ಪಡೆದ ನಿಪಿ-56ರ ದಾಖಲೆ ಹಾಜರು ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-56ರ ದೃಡೀಕರಣ ಪತ್ರದೊಂದಿಗೆ ಹಾಜರು ಪಡಿಸಿದ ನನ್ನ ಪ್ರಮಾಣ ಪತ್ರ ಖೊಟ್ಟಿ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ಅದು ಕಾನೂನು ಬದ್ದವಾದ ಪ್ರಮಾಣ ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ.

8. ಯಾವುದೇ ಖರೀದಿ ಪತ್ರವದಲ್ಲಿ ಮಾರಾಟಗಾರ, ಖರೀದಿದಾರ ಹಾಗೂ ಸಾಕ್ಷಿದಾರರ ಹೆಸರುಗಳು ಮತ್ತು ಆಸ್ತಿಯ ಸರ್ವೆ ನಂಬರು ಕಡ್ಡಾಯವಾಗಿ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-54ರ ಖರೀದಿ ಪತ್ರದಲ್ಲಿನ 3 ನೇ ಪುಟದಲ್ಲಿನ 1 ನೇ ಸಾಕ್ಷಿದಾರನ ಹೆಸರನ್ನು ಓದಿ ಹೇಳುವಂತೆ ತಿಳಿಸಲಾಗಿ ಸಾಕ್ಷಿ ಬಾಲಪ್ಪ ತಂದೆ ಗಜಲಪ್ಪ ಮೆಣಸಿನ ಎಂದು ನಮೂದು ಇದೆ ಎಂದು ನುಡಿಯುತ್ತಾರೆ. 1963-1974 ವರೆಗೆ ಪಹಣಿ ಪತ್ರಿಕೆಯಲ್ಲಿಯೂ ಸಹ ಬಾಲಪ್ಪ ತಂದೆ ಗಜಲಪ್ಪ ಎಂದು ಹೆಸರು ನಮೂದು ಇತ್ತು ಎಂದರೆ ಸರಿ. ಪಹಣಿಗಳಲ್ಲಿಯೂ ಸಹ ಆತನ ಅಡ್ಡ ಹೆಸರು ಮೆಣಸಿನ ಎಂದು ನಮೂದು ಇದೆ ಎಂದರೆ ಸರಿ. ಸದರಿ ಪಹಣಿಗಳಲ್ಲಿರುವ ಬಾಲಪ್ಪ ಹಾಗೂ ನಿಪಿ-54ರ ಸಾಕ್ಷಿದಾರನಾದ ಬಾಲಪ್ಪ ಒಬ್ಬನೇ ವ್ಯಕ್ತಿಯಾಗಿರುತ್ತಾನೆ ಎಂದರೆ ಸರಿಯಲ್ಲ. ಅವರು ಬೇರೆ ಬೇರೆ ವ್ಯಕ್ತಿಗಳಾಗಿರುತ್ತಾರೆ ಎಂಬುದನ್ನು ತೋರಿಸಲು ನಾನು ದಾಖಲೆ

ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಬಾಲಪ್ಪ ತಂದೆ ಗಜಲಪ್ಪ ಮೆಣಸಿನ್ ರವರ ಮೊಮ್ಮಗ ಆಗಿರುತ್ತೇನೆ ಎಂದು ತೋರಿಸಲು ಸೂಕ್ತ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಬಾಲಪ್ಪ ರವರ ಮೊಮ್ಮಗ ಆಗಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

9. ನಂದೆಪಲ್ಲಿಯಲ್ಲಿ ನೀಲಕಠಪ್ಪ ಎಂಬ ಮಾಸ್ಟರ್ ಇದ್ದರು ಎಂದರೆ ಸರಿ. ಆತ ನಂತರ ಕೆಲಸಕ್ಕೆ ರಾಜಿನಾಮೆ ಕೊಟ್ಟು ದೊಡ್ಡ ಗುತ್ತಿಗೆದಾರನಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನೀಲಕಂಠಪ್ಪ ಹಾಗೂ ಬಾಲಪ್ಪ ರವರ ನಡುವೆ ಬಹಳ ಅನ್ಯೂನ್ಯವಾದ ಸಂಬಂಧ ಇತ್ತು ಎಂದರೆ ಸರಿಯಲ್ಲ. ನೀಲಕಂಠಪ್ಪ ರವರ ಎಲ್ಲಾ ಯಂತ್ರೋಪಕರಣ ಹಾಗೂ ಸಾಮಾಗ್ರಿಗಳನ್ನು ಬಾಲಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಪ್ರೀತಿ ವಿಶ್ವಾಸದ ಮೇರಗೆ ಬಾಲಪ್ಪ ತನ್ನ 03 ಎಕರೆ 24 ಗುಂಟೆ ಜಮೀನನ್ನು ನೀಲಕಂಠಪ್ಪ ರವರಿಗೆ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಆ ನಂತರ ಸ್ವತಃ ಬಾಲಪ್ಪ ರವರೇ ನೀಲಕಂಠಪ್ಪ ರವರ ಹೆಸರಿಗೆ ಜಮೀನು ಖಾತಾ ವರ್ಗಾವಣೆ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ನೀವು 1974-75 ರಲ್ಲಿ ಜನಿಸಿರಲಿಲ್ಲ ಹಾಗಾಗಿ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿದ್ದೇನೆಂದು ನುಡಿಯುತ್ತಾರೆ. ಖರೀದಿದಾರ ಮಾಣಿಕಪ್ಪ ರವರಿಗೆ ಆಗದ ವ್ಯಕ್ತಿಗಳ ಮಾತು ಕೇಳಿ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1981 ರಲ್ಲಿ ಖರೀದಿ ಆದಾಗಿನಿಂದ ಮಾಣಿಕಪ್ಪ ಹಾಗೂ ಆತನ ಕುಟುಂಬದವರು ದಾವಾ ಜಮೀನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನಾನು ಬೇರೆಯವರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವಾ ಜಮೀನಿನ ಮಾಲಿಕ ಅಥವಾ ಕಬ್ಜೆದಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ

ಓ.ಎಸ್. ನಂಃ **131/2017**
ಪಿ ಡಬ್ಲ್ಯೂಃ **6**

ದಿನಾಂಕಃ 13-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಹೆಚ್ ಜಿ ವಕೀಲರಿಂದಃ

ನರಸಪ್ಪ ಎಂಬಾತ ನನ್ನ ತಮ್ಮ ಆಗಿರುತ್ತಾನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾಣಿಕಪ್ಪನ ಮಕ್ಕಳಿಗೂ ಹಾಗೂ ನನ್ನ ತಮ್ಮ ನರಸಪ್ಪನಿಗೂ ಗಲಾಟೆ ಆಗಿತ್ತು ಎಂದರೆ ಸರಿ. ಮಾಣಿಕಪ್ಪ ರವರ ಜಮೀನಿಗೆ ಹೊಂದಿಕೊಂಡು ನನ್ನ ಹಾಗೂ ನನ್ನ ತಮ್ಮನ ಜಮೀನು ಇರುತ್ತದೆ. ಮಾಣಿಕಪ್ಪರವರ ಜಮೀನು ನನ್ನ ತಮ್ಮ ನರಸಪ್ಪನ ಪಾಲಿನ ಜಮೀನಿಗೆ ಹೊಂದಿಕೊಂಡು ಇರುತ್ತದೆ. ನಿಮ್ಮ ಹಾಗೂ ಮಾಣಿಕಪ್ಪನ ಜಮೀನುಗಳು ಈಗ ಗದ್ದೆ ಜಮೀನುಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನಮ್ಮ ಜಮೀನು ಅರ್ಧ ಗದ್ದೆಯಾಗಿದ್ದು ಉಳಿದ ಅರ್ಧ ಖುಸ್ಕಿ ಹೊಲ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಾಣಿಕಪ್ಪನ ಜಮೀನು ಸಹ ಅರ್ಧ ಗದ್ದೆ ಹಾಗೂ ಅರ್ಧ ಖುಸ್ಕಿ ಹೊಲ ಆಗಿರುತ್ತದೆ. ನಿಮ್ಮ ಹಾಗೂ ಮಾಣಿಕಪ್ಪನ ಜಮೀನುಗಳ ದಕ್ಷಿಣಕ್ಕೆ ದೊಡ್ಡ ಹಳ್ಳ ಇದೆಎಂದರೆ ಸಾಕ್ಷಿಯು ಎರಡು ದಿಕ್ಕಿಗೆ ರಸ್ತೆ, ಒಂದು ದಿಕ್ಕಿಗೆ ಹೊಲ ಹಾಗೂ ಇನ್ನೊಂದು ದಿಕ್ಕಿಗೆ ಹಳ್ಳ ಇದೆ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂ.62 ಹಾಗೂ 65ರ ಜಮೀನಿನಲ್ಲಿ ಸೈದಾಪೂರ-ನಾರಾಯಣಪೇಟೆ ರಸ್ತೆ ಹಾದು ಹೋಗಿರುತ್ತದೆ ಎಂದರೆ ಸರಿ. ಮಾಣಿಕಪ್ಪ ಖರೀದಿ ಮಾಡುವ ಪೂರ್ವದಿಂದಲೂ ದಾವಾ ಜಮೀನಿನಲ್ಲಿ ಸದರಿ ರಸ್ತೆ ಇರುತ್ತದೆ ಎಂದರೆ ಸರಿ. ಖರೀದಿ ಮಾಡಿದಾಗಿನಿಂದಲೂ ಮಾಣಿಕಪ್ಪನ ಕುಟುಂಬದವರು ದಾವಾ ಜಮೀನಿನ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಮಾಡಿಕೊಂಡು ತಿನ್ನುತ್ತಿದ್ದಾರೆ ಎಂದು ನುಡಿಯುತ್ತಾರೆ.

2. ನಮ್ಮ ಊರಿನಲ್ಲಿ ನೀಲಕಂಠಪ್ಪ ಮಾಸ್ಟರ್ ಇದ್ದರು ಎಂದರೆ ಸರಿ. ಆತ ಶಿಕ್ಷಕ ವೃತ್ತಿ ಬಿಟ್ಟು ಗುತ್ತಿಗೆದಾರ ಆಗಿದ್ದರು ಎಂದರೆ ಸರಿ. ಆತ ದೊಡ್ಡ ಪ್ರಮಾಣದ ಗುತ್ತಿಗೆ ಕೆಲಸಗಾರನಾಗಿದ್ದರು ಎಂದರೆ ಸರಿ. ಬಾಲಪ್ಪ ರವರು ಸದರಿ ನೀಲಕಂಠಪ್ಪನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾಲಪ್ಪ ಸದರಿ ನೀಲಕಂಠಪ್ಪನೊಂದಿಗೆ ವಹಿವಾಟ ಹೊಂದಿದ್ದನು ಎಂದರೆ ನನಗೆ ಗೊತ್ತಿಲ್ಲ. ಸಾಯಿಬಣ್ಣ ತಂದೆ ಶರಣಪ್ಪ ಸಂಜುನೋರ ಎಂಬಾತ ಪಿ.ಡಬ್ಲೂ-7 ಭೀಮಶಪ್ಪ ರವರ ಅಣ್ಣ-ತಮ್ಮಂದಿರ ಪೈಕಿ ಆಗಿರುತ್ತಾರೆ ಎಂದರೆ ಸರಿ. ಬಾಲಪ್ಪ ತಂದೆ ಗೆಜಲಪ್ಪ ಮೆಣಸಿನಕಾಯಿ ಎಂಬಾತ ಇದ್ದರು ಎಂದರೆ ಸರಿ. ನೀಲಕಂಠಪ್ಪ ರವರು ಮಾಣಿಕಪ್ಪನಿಗೆ ಮಾಡಿಕೊಟ್ಟ ಖರೀದಿ ಪತ್ರಕ್ಕೆ ಸದರಿ ಸಾಯಿಬಣ್ಣ ಹಾಗೂ ಬಾಲಪ್ಪ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸಾಕ್ಷಿ ಇರಬಹುದು, ಬಾಲಪ್ಪನಿಗೆ ಅಣ್ಣ-ತಮ್ಮಂದಿರು ಇರಲಿಲ್ಲವೇ ಎಂದು ಮರು ಪ್ರಶ್ನೆ ಮಾಡಿರುತ್ತಾರೆ. 1 ನೇ ವಾದಿ

ಶಿವಪ್ಪ ಹಾಗೂ ಆತನ ತಂದೆ ಬಸವರಾಜ ರವರು ಬಾಲಪ್ಪನ ಸಂಬಂಧಿಕರಾಗಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಬಾಲಪ್ಪನ ಮಗ ಹಾಗೂ ಮೊಮ್ಮಗ ಆಗಿರುತ್ತಾನೆ ಎಂದು ನುಡಿಯುತ್ತಾರೆ. 1 ನೇ ವಾದಿ ಮೊಮ್ಮಗ ಹಾಗೂ ಆತನ ತಂದೆ ಬಾಲಪ್ಪನ ಮಗ ಆಗಿರುತ್ತಾನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಂಬಂಧವನ್ನು ರುಜುವಾತು ಪಡಿಸಲು ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ನನ್ನ ತಮ್ಮ ನರಸಪ್ಪ ಸೇರಿಕೊಂಡು ಮಾಣಿಕಪ್ಪನ ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯರಿಂದ ಈ ದಾವೆ ದಾಖಲು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೂ ಹಾಗೂ ದಾವಾ ಜಮೀನಿಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ವಾದಿಯರು ದಾವಾ ಜಮೀನಿನ ಮಾಲಿಕರು ಅಥವಾ ಕಬ್ಜೆದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

3. ನೀಲಕಂಠಪ್ಪನಿಗೆ ಮಕ್ಕಳು ಇದ್ದಾರೆ. ನಿಂಗಪ್ಪ, ಶಿವಪ್ಪ, ರವಿ, ಗುರುರಾಜ್, ಬನ್ನಪ್ಪ ಹಾಗೂ ಈಶಪ್ಪ ಸೇರಿದಂತೆ ನೀಲಕಂಠಪ್ಪನಿಗೆ 06 ಜನ ಮಕ್ಕಳಿದ್ದು ಆ ಪೈಕಿ ಗುರುರಾಜ ಹಾಗೂ ಬನ್ನಪ್ಪ ಇಬ್ಬರು ಮರಣಹೊಂದಿರುತ್ತಾರೆ. ಉಳಿದ ನಾಲ್ಕು ಜನ ಜೀವಂತ ಇದ್ದಾರೆ ಎಂದರೆ ಸರಿ. ನಾನು ಹಾಗೂ ನನ್ನ ತಮ್ಮ ನರಸಪ್ಪ ಮತ್ತು 1 ನೇ ವಾದಿ ಶಿವಪ್ಪ ಸೇರಿಕೊಂಡು ಮಾಣಿಕಪ್ಪ ರವರ ಮಕ್ಕಳಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ

ಓ.ಎಸ್. ನಂಃ **131/2017**
ಪಿ ಡಬ್ಲ್ಯೂಃ 7

ದಿನಾಂಕಃ 13-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಹೆಚ್ ಜಿ ವಕೀಲರಿಂದಃ

ನಮ್ಮ ಅಡ್ಡ ಹೆಸರು ಸಂಜುನೋರ ಎಂದು ಇರುತ್ತದೆ. ನನಗೆ ಈಗ 80 ವರ್ಷ ವಯಸ್ಸಾಗಿದೆ. ನಾನು ನನ್ನ 18 ನೇ ವರ್ಷ ವಯಸ್ಸಿನಲ್ಲಿ ಮುಂಬೈಗೆ ಹೋಗಿದ್ದೆನು. ನಂತರ 20 ವರ್ಷಗಳ ಕಾಲ ಮುಂಬೈಯಲ್ಲಿ ಇದ್ದೆನು. ಆ ನಂತರ ನಾನು ನಂದೆಪಲ್ಲಿ ಗ್ರಾಮದಲ್ಲಿ ವಾಸವಾಗಿದ್ದು, ಆಗಾಗ ಮುಂಬೈಗೆ ಹೋಗಿ ಬರುತ್ತಿದ್ದೆನು. ಗೆಜಲಪ್ಪ ರವರಿಗೆ ಒಟ್ಟು 05 ಜನ ಮಕ್ಕಳಿದ್ದರು. ಆತನ ಹೆಣ್ಣುಮಕ್ಕಳು ಮರಣಹೊಂದಿದ್ದಾರೆ. ಗೆಜಲಪ್ಪ ರವರ ಮೂರು ಜನ ಗಂಡು ಮಕ್ಕಳ ಹೆಸರು ಬಾಲಪ್ಪ ಎಂದು ಇರುತ್ತದೆ. ಆ ಪೈಕಿ ಸಣ್ಣ ಬಾಲಪ್ಪ ಮನೆ ಅಳಿಯನಾಗಿ ಹೋಗಿದ್ದು ಈಗ ಮರಣಹೊಂದಿರುತ್ತಾನೆ. ದೊಡ್ಡ ಬಾಲಪ್ಪ ತೀರಿಕೊಂಡು ಈಗ 60 ವರ್ಷ ಆಗಿರುತ್ತದೆ. ಸಣ್ಣ ಬಾಲಪ್ಪ ತೀರಿಕೊಂಡು ಈಗ 15 ವರ್ಷ ಆಗಿರುತ್ತದೆ. ಸಣ್ಣ ಬಾಲಪ್ಪನಿಗೆ ಇಬ್ಬರು ಮಕ್ಕಳಿದ್ದರು, ಆ ಪೈಕಿ ಒಬ್ಬ ಮಗ ತೀರಿಕೊಂಡಿರುತ್ತಾನೆ.

2. ನಮ್ಮ ಊರಿನಲ್ಲಿ ನೀಲಕಂಠಪ್ಪ ಮಾಸ್ಟರ್ ಎಂಬಾತ ಇದ್ದರು ಎಂದರೆ ಸರಿ. ಸದರಿ ನೀಲಕಂಠಪ್ಪ ಗುತ್ತಿಗೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಬಾಲಪ್ಪ ಎಂಬಾತ ನೀಲಕಂಠಪ್ಪ ರವರ ಹತ್ತಿರ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಬಾಲಪ್ಪ ಹಾಗೂ ನೀಲಕಂಠಪ್ಪ ರವರ ನಡುವೆ ಬಹಳ ದಿನಗಳ ಸ್ನೇಹ ಸಂಬಂಧ ಇತ್ತು ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಬಾಲಪ್ಪ ರವರು ಬಹಳ ದಿನಗಳ ವರೆಗೆ ನೀಲಕಂಠಪ್ಪ ರವರೊಂದಿಗೆ ಇದ್ದರು ಎಂದರೆ ಸರಿ. ನೀಲಕಂಠಪ್ಪ ರವರಿಗೆ ಬಾಲಪ್ಪ ಹೊಲ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ಹೊಲ ಕೊಟ್ಟಿಲ್ಲಎಂದು ನುಡಿಯುತ್ತಾರೆ. ನೀಲಕಂಠಪ್ಪನಿಗೆ ಬಾಲಪ್ಪ ಹೊಲ ಕೊಟ್ಟಿರುವುದು ನಿಮಗೆ ಗೊತ್ತಿದೆಯೋ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀಲಕಂಠಪ್ಪನಿಗೆ ಮಕ್ಕಳಿದ್ದಾರೆಯೇ ಎಂದರೆ ಸಾಕ್ಷಿಯು ಇಬ್ಬರು ತೀರಿಕೊಂಡಿದ್ದು ಈಗ ನಾಲ್ಕು ಜನ ಇದ್ದಾರೆ ಎಂದು ನುಡಿಯುತ್ತಾರೆ. ಸದರಿ ನೀಲಕಂಠಪ್ಪನ ಮಕ್ಕಳು ಮೂರು ಜನ ನಂದೆಪಲ್ಲಿ ಗ್ರಾಮದಲ್ಲಿ ಹಾಗೂ ಒಬ್ಬ ಗುರುಮಠಕಲಿನಲ್ಲಿ ಇದ್ದಾರೆ. ಬಾಲಪ್ಪ ಹಾಗೂ ನೀಲಕಂಠಪ್ಪ ಸೇರಿಕೊಂಡು ಮಾಣಿಕಪ್ಪ ರವರಿಗೆ ಹೊಲ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.62 ಹಾಗೂ 65 ರ ಜಮೀನುಗಳು ನೀಲಕಂಠಪ್ಪನ ಸ್ವಾದೀನದಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ.

3. ಬಾಲಪ್ಪನ ತಂದೆ ಗೆಜಲಪ್ಪ ಒಟ್ಟು ಎಷ್ಟು ಜಮೀನು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾಣಿಕಪ್ಪ ತೀರಿಕೊಂಡ ನಂತರ ದಾವಾ ಜಮೀನನ್ನು ಆತನ ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಕಳೆದ 20 ವರ್ಷಗಳಿಂದ ನಾನು ನಸಲವಾಯಿ ಗ್ರಾಮದಲ್ಲಿ ವಾಸವಾಗಿದ್ದೆನೆಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನನಗೆ ಓದಲು-ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅವರ ಪ್ರಮಾಣ ಪತ್ರ ತೋರಿಸಲಾಗಿ ಅದರಲ್ಲಿ ಇರುವ ತಮ್ಮ ಸಹಿಯನ್ನು ಗುರುತಿಸಿ ಅದರಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿ ಶಿವಪ್ಪ ಕರೆದುಕೊಂಡು ಬಂದಿರುವುದರಿಂದ ನ್ಯಾಯಾಲಯಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿಯು ಅಷ್ಟೆ ಎಂದು ನುಡಿಯುತ್ತಾರೆ.

4. ನನಗೆ ಮಾಣಿಕೆಪ್ಪನ ಪರಿಚಯ ಇದೆ ಎಂದರೆ ಸರಿ. ಆತ ಜಮೀನು ಖರೀದಿ ಮಾಡಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ. ಮಾಣಿಕೆಪ್ಪ ದಾವಾ ಜಮೀನಿನ ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾಲಪ್ಪ ರವರು ನೀಲಕಂಠಪ್ಪನ ಹತ್ತಿರ ಜೇತದ ಆಳಾಗಿದ್ದರು ಆದರೆ ಆತನಿಗೆ ಜಮೀನು ಕೊಟ್ಟಿರುವುದಿಲ್ಲ. ಬಾಲಪ್ಪ ಹಣ ಪಡೆದುಕೊಂಡು ನೀಲಕಂಠಪ್ಪನಿಗೆ ಜಮೀನು ಕೊಟ್ಟಿದ್ದು, ನನಗೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ